# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ನ್ಯಾಯಾಲಯಗಳ ಆವರಣ ನವನಗರ ಬಾಗಲಕೋಟ
## DISTRICT LEGAL SERVICE AUTHORITY
DISTRICT COURT COMPLEX BAGALKOT

**Phone:08354-235876** **Email:dlsabagalkot@gmail.com**


**Dis No:/DLSA/BGK/ /2025** **Date: 16-04-2025**

## : ಅಧಿಸೂಚನೆ :

**ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:02-05-2025 ಸಮಯ ಮಧ್ಯಾಹ್ನ 02-00 ಘಂಟೆಗೆ**

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟ ಮತ್ತು ತಾಲೂಕು ಕಾನೂನು ಸೇವಾ ಸಮಿತಗಳಾದ ಬನಹಟ್ಟಿ, ಜಮಖಂಡಿ, ಮುಧೋಳ, ಬೀಳಗಿ, ಹುನಗುಂದ ಮತ್ತು ಬಾದಾಮಿ ಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸಮಿತಿಯ (ಪ್ಯಾನಲ್) ವಕೀಲರ ನೇಮಕ ಆಗಿ ಮೂರು ವರ್ಷಗಳು ಪೂರ್ಣಗೊಳ್ಳತ್ತಿರುವ ಕಾರಣ ಹೊಸದಾಗಿ ಸಮೀತಿಯ (ಪ್ಯಾನೆಲ್) ವಕೀಲರನ್ನು ನೇಮಕ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ
1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಪತ್ರ ಸಂಖ್ಯೆ01/Panel Advocates/2025/596 ದಿನಾಂಕ: 09-04-2025.
2. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ / ನೇಮಕಾತಿ / 01 / 2025 ದಿ:16/04/2025.

*****

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟ ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳಾದ ಬನಹಟ್ಟಿ, ಜಮಖಂಡಿ, ಮುಧೋಳ, ಬೀಳಗಿ, ಹುನಗುಂದ ಮತ್ತು ಬಾದಾಮಿಗಳಲ್ಲಿ ಕಾರ್ಯನಿರ್ವಹಿಸಲು "ಸಮಿತಿಯ ನ್ಯಾಯವಾದಿಗಳನ್ನಾಗಿ" (ಪ್ಯಾನೆಲ್ ವಕೀಲರನ್ನು) ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.

**ನೇಮಕಾತಿ ವಿಧಾನ:-**

ರಾಷ್ಟ್ರೀಯ ಕಾನೂನ ಸೇವೆಗಳ ಪ್ರಾಧಿಕಾರ (ಉಚಿತ ಹಾಗೂ ಸಮರ್ಥ) ನಿಯಮ 2010 ರ ನಿರ್ದೇಶನದಂತೆ ನೇಮಕಾತಿ ಪ್ರಾಧಿಕಾರ/ಸಮಿತಿ ಮುಖ್ಯಸ್ಥರಾದ ಗೌರವಾನ್ವಿತ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು.

**ಅರ್ಹತೆಗಳು:-**

1) ಅಭ್ಯರ್ಥಿಗಳು ಕಡ್ಡಾಯವಾಗಿ 03 ವರ್ಷಕ್ಕು ಹೆಚ್ಚು ವಕೀಲರ ವೃತ್ತಿಯನ್ನು ಸಂಬಂಧಪಟ್ಟ ವಕೀಲರ ಸಂಘದಲ್ಲಿ ಸದಸ್ಯತ್ವನ್ನು ಪಡಿದರತಕ್ಕದ್ದು.
2) ಅಭ್ಯರ್ಥಿಯ ಮುಖ್ಯವಾಗಿ ಸೇವಾ ಮನೋಭಾವನೆಯನ್ನು ಹೊಂದಿರತಕ್ಕದ್ದು.

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು:-**

1. ಸಮಿತಿಯ (ಪ್ಯಾನೆಲ್ ವಕೀಲರನ್ನು) ನ್ಯಾಯಾವಾದಿಗಳಾಗಿ ಸೇವೆ ಸಲ್ಲಿಸಲು ಇಚ್ಛೆಯಿರುವ ಅರ್ಹ ನ್ಯಾಯವಾದಿಗಳು ಅರ್ಜಿಯನ್ನು (Schedule-I/ನಮೂನೆ-1) ರಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಎ.ಡಿ.ಆರ್ ಕಟ್ಟಡ, ಜಿಲ್ಲಾ ನ್ಯಾಯಾಲಯಗಳ ಆವರಣ ಬಾಗಲಕೋಟ ಅಥವಾ ತಾಲೂಕು ಕಾನೂನು ಸೇವಾ ಸಮಿತಿಯ ಕಚೇರಿಗಳಾದ ಬನಹಟ್ಟಿ ಜಮಖಂಡಿ, ಮುಧೋಳ, ಬೀಳಗಿ, ಹುನಗುಂದ

ಮತ್ತು ಬಾದಾಮಿ ನ್ಯಾಯಾಲಯ ಸಂಕೀರ್ಣದಲ್ಲಿ ಹಾಗೂ ಜಿಲ್ಲಾ ನ್ಯಾಯಾಲಯದ ವೆಬ್ ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ತಾವು ಕಾರ್ಯನಿರ್ವಹಿಸುತ್ತಿರುವ ವ್ಯಾಪ್ತಿಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿ ಅಥವಾ ತಾಲೂಕು ಕಾನೂನು ಸೇವಾ ಸಮಿತಿಯ ಕಛೇರಿಯಲ್ಲಿ ನಿಗಧಿತ ದಿನಾಂಕದ ಒಳಗಾಗಿ ಸಲ್ಲಿಸತಕ್ಕದ್ದು.

3. ಅಭ್ಯರ್ಥಿಗಳು ಬರ್ತಿ ಮಾಡಿದ ನಿಗದಿತ ನಮೂನೆಯೊಂದಿಗೆ ತಾವು ನೊಂದಣಿ ಮಾಡಿಕೊಂಡ ವಕೀಲರ ಸಂಘದಿಂದ ವೃತ್ತಿಯ ಅನುಭವದ ಪ್ರಮಾಣ ಪತ್ರವನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತನಿಂದ ಪಡೆದುಕೊಂಡ ಪ್ರಮಾಣ ಪತ್ರವನ್ನು ಹಾಗೂ 02 ಪಾಸಪೋರ್ಟ ಅಳತೆಯ ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

4. ಅಭ್ಯರ್ಥಿಗಳು ಅರ್ಜಿಯಲ್ಲಿರುವ ಸಾಮಾನ್ಯ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಹಾಗೂ ಅನುಸರಿಸಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

5. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಚಾಲ್ತಿ ಇರುವ ದೂರವಾಣಿ ಸಂಖ್ಯೆ/ವಾಟ್ಸಪ ನಂಬರ ಮತ್ತು ಈ ಮೇಲ್ ವಿಳಾಸವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

6. ಸಮಿತಿಯ (ಪ್ಯಾನೆಲ್ ವಕೀಲರನ್ನು) ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡಿಕೊಳ್ಳುಲು ಸಮಿತಿಯ ಅಧ್ಯಕ್ಷರ ನಿರ್ಣಯವೇ ಅಂತಿಮವಾಗಿರುತ್ತದೆ.

7. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಶಿಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ನ್ಯಾಯಾಲಯದ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ / ತಾಲೂಕು ಕಾನೂನು ಸೇವಾ ಸಮಿತಿ ಕಚೇರಿಯ ನೋಟಿಸ ಬೋರ್ಡನಲ್ಲಿ ಪ್ರಕಟಿಸಲಾಗುವುದು.

8. ಅರ್ಹ ಅಭ್ಯರ್ಥಿಗಳ ಸಂದರ್ಶನದ ಸಮಯ ಹಾಗೂ ಸ್ಥಳವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ /ತಾಲೂಕು ಕಾನೂನು ಸೇವಾ ಸಮಿತಿ ಅರ್ಜಿದಾರರ ಈ ಮೇಲ್ ಹಾಗೂ ವಾಟ್ಸಪ ಮುಖಾಂತರ ತಿಳಿಸಲಾಗುವುದು.

9. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನದ ಬಗ್ಗೆ ಮಾಹಿತಿ ಬರದಿರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಲ್ಲವೆಂದು ಭಾವಿಸಕೊಳ್ಳತಕ್ಕದ್ದು.

10. ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಈ ಕಚೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಅಸ್ಪದವಿರುವುದಿಲ್ಲ.

11. ಅಭ್ಯರ್ಥಿಯ ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಯಿಂದ ಅನರ್ಹಗೊಳಿಸ-ಲಾಗುವುದು.

12. ಸಮಿತಿಯ (ಪ್ಯಾನೆಲ್ ವಕೀಲರನ್ನು) ನ್ಯಾಯವಾದಿಗಳ ನೇಮಕಾತಿಯ ಅಭ್ಯರ್ಥಿಯ ಸಂಪೂರ್ಣ ಅರ್ಹತೆ ಮತ್ತು ಮೌಖಿಕ ಪರೀಕ್ಷೆಗೊಳಪಟ್ಟಿರುತ್ತದೆ.

13. ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡ ನಂತರದಲ್ಲಿ ಸಮಿತಿಯ (ಪ್ಯಾನಲ ವಕೀಲರನ್ನು) ನ್ಯಾಯವಾದಿಗಳ ಕರ್ತವ್ಯ ನಿರ್ವಹಣೆಯಲ್ಲಿ ತೃಪ್ತಿಕರವಾಗಿರದ ಸಂದರ್ಭದಲ್ಲಿ ಅಂತಹ ನ್ಯಾಯವಾದಿಯನ್ನು ಸಮಿತಿಯಿಂದ ತಗೆದು ಹಾಕುವ ಸಂಪೂರ್ಣ ಅಧಿಕಾರ ನೇಮಕಾತಿ ಸಮಿತಿಗೆ ಇರುತ್ತದೆ.

14. ಸಮಿತಿಯ (ಪ್ಯಾನೆಲ್ ವಕೀಲರನ್ನು) ನ್ಯಾಯವಾದಿಯಾಗಿ ನೇಮಕಗೊಂಡ ಕಾರ್ಯನಿರ್ವಹಿಸುವ ಸಂರ್ಭದಲ್ಲಿ ಉಚಿತ ಕಾನೂನು ನೆರವು ಕೋರಿ ಬಂದ ಅರ್ಜಿದಾರರಿಂದ ಯಾವುದೇ ಗೌರವಧನ ಅಥವಾ ಮೌಲ್ಯಯುತವಾದ ಕಾಣಿಕೆಗಳನ್ನು ಪಡೆಯಂತಿಲ್ಲ ಹಾಗೂ ಅವರನ್ನು ಕೊಡುವಂತೆ ಒತ್ತಾಯಿಸುವಂತಿಲ್ಲ.

ಹಾಗೇ ಪಡೆದುಕೊಂಡ ಮಾಹಿತಿಯ ಪ್ರಾಧಿಕಾರ ಗಮನಕ್ಕೆ ಬಂದಲ್ಲಿ ತತಕ್ಷಣದಲ್ಲಿಯೇ ಸಮಿತಿಯ ನ್ಯಾಯವಾದಿಯ ಕರ್ತವ್ಯದಿಂದ ಅವರನ್ನು ವಜಾಗೊಳಿಸಲಾಗುವುದು.

15. ಸಮಿತಿಯ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಲು 03 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಒಂದು ವೇಳೆ ಸಮಿತಿಯ ನ್ಯಾಯವಾದಿಯ ಕಾರ್ಯವೈಕರಿಯು ತೃಪ್ತಿಕರ ಹಾಗೂ ಸಮರ್ಪಕವಾಗಿರುವುದಿಲ್ಲ ಎಂದು ಕಂಡುಬಂದಲ್ಲಿ ಸಮಿತಿಯ ನ್ಯಾಯವಾದಿಯ ಕರ್ತವ್ಯದಿಂದ ಅವರನ್ನು ವಜಾಗೊಳಿಸುವ ಅಧಿಕಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹೊಂದಿರುತ್ತದೆ.

16. ನಿಗಧಿತ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**-Sd-**
(ಎನ್. ವಿ. ವಿಜಯ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮತ್ತು ಅಧ್ಯಕ್ಷರು ಜಿ.ಕಾ.ಸೇ ಪ್ರಾಧಿಕಾರ,
ಬಾಗಲಕೋಟ.

**ಪ್ರತಿಯನ್ನು:-**

1. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬಾಗಲಕೋಟ ನೋಟಿಸ ಬೋರ್ಡಿಗೆ
2. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟ ನೋಟಿಸ ಬೋರ್ಡಿಗೆ.
3. ಸದಸ್ಯ ಕಾರ್ಯದರ್ಶಿಗಳು, ತಾಲೂಕು ಕಾನೂನು ಸೇವಾ ಸಮಿತಿ ಬನಹಟ್ಟಿ, ಜಮಖಂಡಿ, ಮುದೋಳ, ಬೀಳಗಿ, ಹುನಗುಂದ ಹಾಗೂ ಬಾದಾಮಿ ನೋಟಿಸ ಬೋರ್ಡಿಗೆ.
4. ಅಧ್ಯಕ್ಷರು, ವಕೀಲರ ಸಂಘ ಬಾಗಲಕೋಟ ಬನಹಟ್ಟಿ, ಜಮಖಂಡಿ, ಮುದೋಳ, ಬೀಳಗಿ, ಹುನಗುಂದ ಹಾಗೂ ಬಾದಾಮಿ ಇವರಿಗೆ ಮತ್ತು ಸದರಿ ಪ್ರಕಟಣೆಯನ್ನು ತಮ್ಮ ಸಂಘದ ನೋಟಿಸ ಬೋರ್ಡಿಗೆ ಲಗತ್ತಿಸಲು ವಿನಂತಿಯೊಂದಿಗೆ.
5. ವಾರ್ತಾ ಇಲಾಖೆ ಬಾಗಲಕೋಟ ಇವರಿಗೆ ಸದರಿ ಪ್ರಕಟಣೆಯನ್ನು ಸ್ಥಳೀಯ ಮತ್ತು ಪ್ರಮುಕ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ.
6. ಕಚೇರಿಯ ಪ್ರತಿ.

**Schedule-I**

# APPLICATION BY THE ADVOCATES FOR EMPANELLMENT

Recent passport size photo

| | | |
|---|---|---|
| 01 | Name of the applicant | |
| 02 | Father / mother / spouse name | |
| 03 | Age | |
| 04 | Address permanent / current | |
| 05 | Land line number | |
| 06 | Mobile number | |
| 07 | Email address | |
| 08 | Educational qualification | |
| 09 | Enrollment number<br>(enclose copy of certificate issued by Karnataka State Bar Council) | |
| 10 | Experience as advocate in years<br>Details of specialization / filed of law | |
| 11 | Caste<br>If belongs to SC/ST/OBC or category, General etc., Please specify | |
| 12 | Languages Knows to read and write | |

I hereby declare that having understood the objectives and purposes of The legal Services Authorities Act I have filed this application.

Place:

Date: Signature of the applicant